## ॥ ದಾಸರ ನಿಂದಿಸಬೇಡ ಮನುಜ ॥

ದಾಸರ ನಿಂದಿಸಬೇಡ ಮನುಜ ।
ಹರಿ । ದಾಸರ ನಿಂದಿಸಬೇಡ ॥ ಪ ॥

ರಾಮನ ನಿಂದಿಸಿ ರಾವಣ ಕೆಟ್ಟ ।
ವಿಭೀಷಣಗಾಯಿತು ಪಟ್ಟ ॥
ಭೂಮಿಯ ಲೋಭದಿ ಕೌರವ ಕೆಟ್ಟ ।
ಧರ್ಮಗೆ ರಾಜ್ಯವ ಬಿಟ್ಟ ॥ ೧ ॥

ಉಡಿಯಲ್ಲಿ ಕೆಂಡವ ಕಟ್ಟಿಕೊಂಡರೆ ।
ಸುಡದಲೆ ಬಿಡುವುದೇನಣ್ಣ ॥
ಪೊಡವಿಯ ಜನರಿಗೆ ಬಡತನ ಬಂದರೆ ।
ಬಿರುನುಡಿ ಆಡದಿರಣ್ಣ ॥ ೨ ॥

ದೇವಕಿ ಸೆರೆಯನು ಬಿಡಿಸಿದ ದಾಸರು ।
ನರರೇನ್ಯೆ ಈ ಜಗದೊಳು ॥
ಭಾವಜನಯ್ಯನ ಭಕುತರ ಸೇವಿಸೆ ।
ಪಾವನ ಮಾಡುವ ಪುರಂದರವಿಠಲ ॥ ೩ ॥